

ಆಟಕ್ಕೆ ಈಗಲೂ ಬೆಲೆ ಇದೆ. ಅವರು ಸಾಕ್ಷಿ ಜತೆ ದಾಂಪತ್ಯ ಬದುಕಿಗೆ ಕಾಲಿಟ್ಟ ಹೊತ್ತಿನಲ್ಲಿ, ಅದಕ್ಕೂ ಮೊದಲು ನಿಶ್ಚಿತಾರ್ಥ ಆದ ನಂತರ ಮಾರುಕಟ್ಟೆ ಅದನ್ನೂ ಬಳಸಿಕೊಳ್ಳಲು ಯತ್ನಿಸಿತ್ತು. ಆದರೆ, ದೋನಿ ಖಾಸಗೀತನವನ್ನು ಕೊಹ್ಲಿಗಿಂತ ಜಾಗರೂಕರಾಗಿ ಕಾಪಾಡಿಕೊಂಡರು. ಅವರು ಪತ್ನಿಯ ಹೆಸರಲ್ಲೊಂದು ಸಮಾಜಸೇವಾ ಸಂಸ್ಥೆ ಪ್ರಾರಂಭಿಸಿದರು. 2011ರಲ್ಲಿ ವಿಶ್ವಕಪ್ ಗೆದ್ದಾಗ ತಾನು ಆಡಿದ್ದ ಬ್ಯಾಟಿಗೆ ಹರಾಜು ಕೂಗಿಸಿದರು. 72 ಲಕ್ಷ ರೂಪಾಯಿಯನ್ನು ಅದೊಂದೇ ಬ್ಯಾಟ್ ತಂದಿತ್ತಿತು. ದೋನಿ ಪತ್ನಿ ಸಾಕ್ಷಿ ನಗದೇ ಇದ್ದಾರೆಯೇ?

ದೋನಿಗಿಂತ ಹೆಚ್ಚು ಮಾರುಕಟ್ಟೆ ಮೌಲ್ಯ ಸಚಿನ್ ತೆಂಡೂಲ್ಕರ್‌ಗೆ ಇತ್ತು. ಸಚಿನ್ ಚುಟುಕು ಕ್ರಿಕೆಟ್ ಆಡಿದ್ದು ಕಡಿಮೆ. ದೋನಿ ಎಲ್ಲ ಸ್ವರೂಪದ ಕ್ರಿಕೆಟ್ಟೂಗೆ ಒಗ್ಗಿಕೊಂಡರು. ಟ್ವೆಂಟಿ–20 ವಿಶ್ವಕಪ್ ಕೂಡ ಗೆದ್ದರು. ಎರಡು ವಿಶ್ವಕಪ್ ಗೆಲ್ಲುವ, ಟೆಸ್ಟ್ ಕ್ರಿಕೆಟ್‌ನಲ್ಲೂ ನಾಯಕತ್ವದ ರೆಕಾರ್ಡನ್ನು ಉತ್ತಮವಾಗಿಯೂ ಸ್ಥಿರವಾಗಿಯೂ ಕಾಪಾಡಿಕೊಳ್ಳುವ ವ್ಯಕ್ತಿಯಾಗಿ ಅವರು ಸಚಿನ್ಗಿಂತ ಮೇಲೇರಿದರು. ಈ ಪ್ರಕ್ರಿಯೆಯಲ್ಲಿ ಅವರು ಹಿರೀಕರಿಗೆ ಮರ್ಯಾದೆ ಕೊಡುವುದನ್ನು ಮಾತ್ರ ಎಂದೂ ಮರೆಯಲಿಲ್ಲ.

ದೋನಿ ಬ್ಯಾಟ್ಗೆ ಅಂಟಿಸಿಕೊಳ್ಳುವ ಎಂಆರ್‌ಎಫ್ ಸ್ಟಿಕ್ಕರ್ ಒಂದೇ ವರ್ಷಕ್ಕೆ 8 ಕೋಟಿ ರೂಪಾಯಿ ಸಂಪಾದಿಸಿ ಕೊಡುತ್ತದೆ. ಕಾರ್ನರ್‌ಸ್ಟೋನ್ ಸ್ಪೋರ್ಟ್ಸ್ ಕಂಪೆನಿಯ ಬಂಟಿ ಸಜ್ದೇ ಈ ಸಂಗತಿಯ ಮೇಲೆ ಬೆಳಕು ಚೆಲ್ಲಿದ್ದರು. ಮೊದಲು ಸಚಿನ್ ಬ್ಯಾಟ್ ಮೇಲೂ ಇಂಥದ್ದೇ ಸ್ಟಿಕ್ಕರ್ ಇದ್ದುದು.ಅವರ ಬ್ರಾಂಡ್ ಮೌಲ್ಯ ಒಂದು ಕಾಲದಲ್ಲಿ ದೋನಿಗಿಂತ ಹೆಚ್ಚೇ ಇತ್ತು. ಈಗ ದೋನಿಯ ಜತೆ ಬ್ಯಾಟ್ ಸ್ಟಿಟ್ಟರ್ ಮೌಲ್ಯದಲ್ಲೂ ಕೊಹ್ಲಿ ರೇಸ್‌ನಲ್ಲಿದ್ದಾರೆ. ಕೆಲವೇ ವರ್ಷಗಳ ಹಿಂದೆ ಕೊಹ್ಲಿ ಬ್ಯಾಟ್ಗೆ ಅಂಟಿಸಿಕೊಳ್ಳುತ್ತಿದ್ದ ಸ್ಟಿಕ್ಕರ್ ವರ್ಷಕ್ಕೆ ಒಂದು ಕೋಟಿಗಿಂತ ಕಡಿಮೆ ಹಣ ತರುತ್ತಿತ್ತು. ಈಗ ಅದು ಹಲವು ಕೋಟಿಗಳಿಗೆ ಜಿಗಿದಿದೆ.

ಕೊಹ್ಲಿಯ ದಿನದ ಜಾಹೀರಾತು ಸಂಭಾವನೆ ದೋನಿಗಿಂತ ಹೆಚ್ಚಿದ್ದರೂ ವರ್ಷದ ಲೆಕ್ಕಾಚಾರ ಕಡಿಮೆ ಆಗಲು ಕಾರಣವಿದೆ. ಕೊಹ್ಲಿ ಮುಂಗೋಪಿಯಂತೆ ಮಾತನಾಡುತ್ತಲೇ ಇರುತ್ತಾರೆ. ಅವರ ಹಾಗೂ ನಟಿ ಅನುಷ್ಕಾ ನಡುವಿನ ಪ್ರೇಮವನ್ನೂ ಜಾಹೀರಾತು ಮಾರುಕಟ್ಟೆ ಕೆಲವು ವರ್ಷಗಳಿಂದ ಬಳಸಿಕೊಳ್ಳುತ್ತಾ ಬಂದಿದೆ. ಅದಕ್ಕೆ ಒಪ್ಪುವುದು

...29ನೇ ಪುಟಕ್ಕೆ



ಶ್ರಮ, ಆತ್ಮವಿಶ್ವಾಸ, ಜನಪ್ರಿಯತೆಯನ್ನು ನಿಭಾಯಿಸುವ ಜಾಣ್ಮೆ ದೋನಿಯ ವೈಶಿಷ್ಟ್ಯ.

ಚಿತ್ರ: ಆರ್.ಶ್ರೀಕಂಠ ಶರ್ಮ

